**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು

**LAC.No.209/2021**

ಆರ್**.**ಡಬ್ಲ್ಯೂ**. 1**

ದಿನಾಂಕಃ **25.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲುಃ ಅರ್ಜಿದಾರರ ಪರವಾಗಿಃ ಶ್ರೀ **HVS** ವಕೀಲರಿಂದಃ

Sy.no.21/2 ರಲ್ಲಿ 0-29 ಗುಂಟೆಯನ್ನು ಮತ್ತು Sy.no.21/3 ರಲ್ಲಿ 11.45 ಗುಂಟೆ ಭೂಸ್ವಾಧೀನಪಡಿಸಿಕೊಂಡಿರುತ್ತಾರೆ ಅಂದರೆ ಸರಿ. ಸಾಕ್ಷಿಗೆ Sy.no.21/3 ಗೆ ಸಂಬಂದಪಟ್ಟ ಅವಾರ್ಡ್ ನೋಟೀಸ್ ನ್ನು ತೋರಿಸಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಆರ್ -2 ಎಂದು ಒಪ್ಪಿಗೆಯ ಮೇರೆಗೆ ನಿಶಾನೆಗೊಳಿಸಲಾಯಿತು. ವರ್ತಿಕಟ್ಟೆ , ಶೆಟ್ಟಿಕೆರೆ , ಹೊಸಕೆರೆ ಹೊಂದಿಕೊಂಡಂತೆ ಗ್ರಾಮ ಅಂದರೆ ಇರಬಹುದು. ಸಾರ್ವಜನಿಕವಾಗಿ ಸಭೆಯನ್ನು ಮಾಡಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಮುಂಚೆ ರೈತರ ಒಪ್ಪಿಗೆಯನ್ನು ಪಡೆದುಕೊಂಡಿರುವುದಿಲ್ಲ.

2) 1 ಗುಂಟೆಗೆ ರೂ.4,320-00 ನ್ನು ಬೆಲೆಯನ್ನು ಖುಷ್ಕಿ ಜಮೀನಿಗೆ ನಿಗದಿಪಡಿಸಿರುತ್ತೇವೆ. ನಾವು ಬೆಲೆಯನ್ನು ನಿಗದಿಪಡಿಸುವ ಸಮಯದಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ಹಿಂದಿನ 3 ವರ್ಷದ ಸಬ್ ರಿಜಿಸ್ಟ್ರ

ಕ್ರಯದ ಕರಾರುಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತೇವೆ. ಪ್ರಸ್ತುತ ಮಾರಕಟ್ಟೆ ಬೆಲೆಯನ್ನು ನಾವು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ.

3) ನಿಪಿ-11 ರ ಪ್ರಕಾರ 1 ಗುಂಟೆಗೆ ರೂ.50,000-00 ನಿರ್ಧಾರವಾಗಿ ರಿಜಿಸ್ಟ್ರರ್ ಆದ ದಾಖಲೆಯಾಗಿದ್ದು ಅದನ್ನು ಪರಿಗಣಿಸಿರುವುದಿಲ್ಲ ಅಂದರೆ ಸರಿಯಲ್ಲ. ಸರ್ವೇ ನಂ.29/3 ರಲ್ಲಿ ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ಮೇಲೆ ಮಾಡಿದ ರೀತಿಯಲ್ಲಿ ಪರಿಹಾರವನ್ನು ನಿಗದಿಪಡಿಸಿರುತ್ತೇವೆ. ಅರ್ಜಿದಾರರಿಗೆ ಪುನರ್ ವಸತಿ ಮತ್ತು ಪುನರ್ ನಿರ್ಮಾಣದ ಸಲುವಾಗಿ ಪರಿಹಾರವನ್ನು ನೀಡಿರುವುದಿಲ್ಲ. ಬೇರೆ ಸರ್ವೇ ನಂಬರ್ ನಲ್ಲಿ 23 ಗುಂಟೆಗೆ ಆರ್ ಅಂಡ್ ಆರ್ ನಿಗದಿಪಡಿಸಿರುತ್ತೇವೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಒಟ್ಟು ಜಮೀನಿನಲ್ಲಿ ಶೇಕಡ 50 ರಷ್ಟು ಭೂಸ್ವಾದೀನವಾದರೆ ಮಾತ್ರ ಆರ್ ಅಂಡ್ ಆರ್ ನಿಗದಿಪಡಿಸುತ್ತೇವೆ. ಸರ್ವೇ ನಂ.21/ 2 and Sy.no.21/3 ರಿಂದ 1 ಎಕರೆ 32 ಗುಂಟೆ ಇತ್ತು ಅಂದರೆ ಇರಬಹುದು. ಅದರಲ್ಲಿ ಒಂದು ಎಕರೆ ಒಂದು ಮುಕ್ಕಾಲು ಗುಂಟೆ ಸ್ವಾಧೀನಪಡಿಸಿಕೊಂಡಿರುತ್ತೀರಿ ಅಂದರೆ ಸರಿ. Syno.29/3 ರಲ್ಲಿ ಅರ್ ಅಂಡ್ ಆರ್ ಸೌಲಭ್ಯವನ್ನು ವಿಸ್ತರಿಸಿಲ್ಲ ಅಂದರೆ ಸರಿ.

4) ನಿಪಿ-10 ರ ಪ್ರಕಾರ ತಾವು ಬೆಲೆಯನ್ನು ನಿಗದಿಪಡಿಸಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು 5 ಗುಂಟೆಯ ಒಳಗೆ ಇರುವುದರಿಂದ ಅದು

ಅನ್ವಯಿಸುವುದಿಲ್ಲವೆಂದು ನುಡಿಯುತಾರೆ. ಸರ್ವೇ ನಂ. 21/1 ರಲ್ಲಿ ಇದ್ದ ಮರವಳಿಗಳಿಗೆ ಯಾವುದೇ ಪರಿಹಾರ ನೀಡಿರುವುದಿಲ್ಲ ಅಂದರೆ ಸರಿ.

5) ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ಭೂಮಾಲೀಕರಿಗೆ ನೋಟೀಸ್ ಜಾರಿ ಮಾಡಿರುತ್ತೇವೆ , ಅದನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಆ ಕುರಿತು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ. ಅರ್ಜಿದಾರರು ಸಲ್ಲಿಸಿರುವ ಅರ್ಜಿಯು ಸಕಾಲದಲ್ಲಿ ಸಲ್ಲಿಸಿದ್ದಾರೆ ಅಂದರೆ ಸರಿ. ಬೆಲೆಯನ್ನು ನಿಗದಿಪಡಿಸುವ ಸಮಯದಲ್ಲಿ ವೈಜ್ಞಾನಿಕವಾಗಿ ಪರಿಹಾರವನ್ನು ನಿಗದಿಪಡಿಸಿರುವುದಿಲ್ಲ ಅಂದರೆ ಸರಿಯಲ್ಲ.

- ಮರುವಿಚಾರಣೆ ಇಲ್ಲ-

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು